೧) ೬೫,೦೦೦-೦೦ ರೂ.ಗಳು.

ಶ್ರೀ ಎಂ. ರಾಮಪ್ಪ.—ಬಳ್ಳಾರಿ ನಗರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕಟ್ಟಡಗಳ ಅಭಾವದಿಂದ ಎಷ್ಟು ಶಾಲೆಗಳಲ್ಲಿ ಸರದಿ ಕ್ರಮದಲ್ಲಿ ನಡೆಸಲಾಗುತ್ತಿದೆ ಎಂದು ಪ್ರಶ್ನೆಯನ್ನು ಕೇಳಿದ್ದಕ್ಕೆ ಎಂಟು ಶಾಲೆಗಳು ಎಂದು ಉತ್ತರದಲ್ಲಿ ಹೇಳಿದ್ದೀರಿ. ಈ ತರಹ ತಪ್ಪು ಮಾಹಿತಿ ಏತಕ್ಕೆ ಕೊಡುತ್ತೀರಿ?

ಶ್ರೀ ಡಿ. ಮಂಜುನಾಥ್.—ಅದು ತಪ್ಪು ಇದ್ದರೆ ನಾನು ನೋಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ನಾವು ಸದನದಲ್ಲಿ ಸರಿಯಾದ ಮಾಹಿತಿಯನ್ನು ಪಡೆದುಕೊಳ್ಳುವುದಕ್ಕೆ ಪ್ರಶ್ನೆಗಳನ್ನು ಹಾಕುತ್ತೇವೆ. ತಾವು ತಪ್ಪು ಇದ್ದರೆ ನೋಡಿ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ ಎಂದು ಹೇಳಿದರೆ ಹೇಗೆ. ತಾವು ಅನ್‌ಸ್ಟಾರ್ಡ್ ಕೊಶ್ಚನ್‌ಗೆ ಉತ್ತರ ಕೊಟ್ಟಿದ್ದು ನಾವು ನೋಡಿಕೊಂಡು ಹೋಗುವ ಹಾಗೆ, ತಾವು ಹೇಳಿದ್ದನ್ನು ಸುಮ್ಮನೆ ಕೇಳಿಕೊಂಡು ಹೋಗಬೇಕೇ? ಈಗ ತಾವು ೮ ಶಾಲೆಗಳು ಎಂದು ಹೇಳಿರುವುದು ತಪ್ಪು ಮಾಹಿತಿ. ತಾವು ಸರಿ ಎಂದು ಹೇಳುವುದಾದರೆ ಆ ಶಾಲೆಗಳ ಹೆಸರುಗಳನ್ನು ಹೇಳುತ್ತೀರಾ. ಶಿಫ್ಟ್ ಸಿಸ್ಟಂ ಮೇಲೆ ಎಷ್ಟು ಶಾಲೆಗಳನ್ನು ನಡೆಸುತ್ತಿದ್ದೀರಾ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಡಿ. ಮಂಜುನಾಥ್.—ಈಗ ಆ ವಿವರಗಳು ಇಲ್ಲ. ನಾನು ತರಿಸಿ ಮಾನ್ಯ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಎಂ. ರಾಮಪ್ಪ.—ಜವಾಬ್ದಾರಿಯಿಂದ ಉತ್ತರ ಕೊಡಲಿ ಎಂದು ನಾವು ವಿವರಗಳನ್ನು ಕೇಳುತ್ತೇವೆ. ತಾವು ಈ ರೀತಿ ಉತ್ತರ ಕೊಟ್ಟರೆ ಸುಮ್ಮನೆ ಕುಳಿತುಕೊಳ್ಳಬೇಕಾಗುತ್ತದೆ.

ಶ್ರೀ ಡಿ. ಮಂಜುನಾಥ್.—ನಮಗೆ ಜವಾಬ್ದಾರಿ ಇದೆ. ಕಟ್ಟಡಗಳ ಅಭಾವ ಎಷ್ಟು ಎಂದು ಕೇಳಿದ್ದೀರಿ, ಅದಕ್ಕೆ ನಾನು ಉತ್ತರ ಹೇಳಿದ್ದೇನೆ. ನೀವು ಕೇಳಿರುವ ಪ್ರಶ್ನೆಗೆ ಮಾತ್ರ ಸರಿಯಾದ ಉತ್ತರ ಕೊಟ್ಟಿದ್ದೇನೆ.

ಚಿಕ್ಕಹಳ್ಳಿ ಗ್ರಾಮದ ರಸ್ತೆ ಸಂಪರ್ಕದ ವ್ಯವಸ್ಥೆ ಬಗ್ಗೆ

೧೨೦ (ತಿಲಕ) ಶ್ರೀ ಪುಪ್ಪಾಪತಿ (ದಾವಣಗೆರೆ) (ಶ್ರೀ ಎಂ.ಎಸ್. ಕೃಷ್ಣನ್ ರವರ ಪರವಾಗಿ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮಾಗಡಿ ತಾಲ್ಲೂಕು ತಿಪ್ಪಸಂದ್ರ ಹೋಬಳಿ ಚಿಕ್ಕಹಳ್ಳಿ ಗ್ರಾಮಕ್ಕೆ ಯಾವ ಗ್ರಾಮದಿಂದಲೂ ರಸ್ತೆ ಸಂಪರ್ಕ ವ್ಯವಸ್ಥೆ ಇಲ್ಲದಿರುವುದು ನಿಜವಲ್ಲವೇ?

ಆ) ಹಾಗಿದ್ದಲ್ಲಿ ಸದರಿ ಗ್ರಾಮಕ್ಕೆ ರಸ್ತೆ ಸಂಪರ್ಕವನ್ನು ಕೂಡಲೇ ಕಲ್ಪಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಇ) ಮರೂರು ಹ್ಯಾಂಡ್ ಪೋಸ್ಟ್‌ನಿಂದ ಕುದೂರು ಮತ್ತು ಸುಗ್ಗನಹಳ್ಳಿ ಮಾರ್ಗವಾಗಿ ಹೊನ್ನುಡಿಕೆವರೆವಿಗೆ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ನಿಜವಲ್ಲವೇ?

ಈ) ಹಾಗಿದ್ದಲ್ಲಿ ಈ ಮಾರ್ಗವನ್ನು ಡಾಂಬರು ರಸ್ತೆಯನ್ನಾಗಿ ಪರಿವರ್ತಿಸಿ ಸಂಚಾರಕ್ಕೆ ಯೋಗ್ಯವಾಗುವಂತೆ ಮಾಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಮತ್ತು ಆ) ಈ ಗ್ರಾಮಕ್ಕೆ ಗ್ರಾಮೀಣ ಸಂಪರ್ಕ ರಸ್ತೆ ಯೋಜನೆ (ಐಸಿಆರ್‌ಸಿ)ಯಲ್ಲಿ ಮಾಡಿದ ಒಂದು ಕಚ್ಚಾ ರಸ್ತೆ ಇದೆ. ಇದನ್ನು ಆರ್ಥಿಕ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಮಾಡಲು ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಇ) ಈ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಕೆಲವು ಭಾಗಗಳು ಅಷ್ಟು ಸಮರ್ಪಕವಾದ ಸ್ಥಿತಿಯಲ್ಲಿಲ್ಲ.

ಈ) ಈ ರಸ್ತೆ ಅಭಿವೃದ್ಧಿಪಡಿಸಿ ಡಾಂಬರು ಹಾಕಲು ಸುಮಾರು ೧೨ ಲಕ್ಷ ರೂಪಾಯಿಗಳು ಬೇಕಾಗುತ್ತದೆ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಈ ಕೆಲಸವನ್ನು ತೆಗೆದು ಕೊಳ್ಳುವುದನ್ನು ಪರ್ಯಾಲೋಚಿಸಲಾಗುವುದು.

ಶ್ರೀ ಪಂಪಾಪತಿ.—ಸ್ವಾಮಿ, ಈಗ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಗ್ರಾಮೀಣ ಸಂಪರ್ಕ ರಸ್ತೆ ಯೋಜನೆ ಮೇರೆಗೆ ಕಚ್ಚಾ ರಸ್ತೆ ಮಾಡಲಾಗಿದ್ದು, ಆರ್ಥಿಕ ಲಭ್ಯತೆಯನ್ನಾಧರಿಸಿ ಅಭಿವೃದ್ಧಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದಾರೆ. ಮಳೆಗಾಲ ಬಂದಾಗ ಜನರು ಹೊಲಗಳಿಗೂ ಕೂಡ ಹೋಗುವುದಕ್ಕಾಗುವುದಿಲ್ಲ. (ಇ) ಪ್ರಶ್ನೆಗೆ ಉತ್ತರ ಕೊಡುತ್ತಾ, ಇದು ಜಿಲ್ಲೆಯ ಮುಖ್ಯ ರಸ್ತೆಯಾಗಿದ್ದು, ಕೆಲವು ಭಾಗಗಳು ಅಷ್ಟು ಸಮರ್ಪಕವಾಗಿಲ್ಲವೆಂದು ಕೂಡ ಹೇಳಿದ್ದಾರೆ. (ಈ) ಪ್ರಶ್ನೆಗೆ ಉತ್ತರ ಕೊಡುತ್ತಾ, ೧೨ ಲಕ್ಷ ರೂಪಾಯಿಗಳು ಬೇಕಾಗುತ್ತದೆಂದು ಹೇಳಿದ್ದಾರೆ. ಇಪತ್ತು ಈ ರಸ್ತೆಯಲ್ಲಿ ಜನಗಳು ಓಡಾಡುವುದಕ್ಕೆ ಆಗುತ್ತಿಲ್ಲ. ವಾಹನಗಳ ಸಂಚಾರ ವಂತೂ ಬಹಳ ಕಷ್ಟವಾಗಿದೆ. ಚಿಕ್ಕಪಳ್ಳಿ ಗ್ರಾಮಸ್ಥರು ಒಮ್ಮೆ ಮಾನ್ಯ ಮಂತ್ರಿಯವರು ನಮ್ಮ ಗ್ರಾಮಕ್ಕೆ ಭೇಟಿ ಕೊಡಬೇಕೆಂದು ಕೂಡ ಮನವಿ ಕೊಟ್ಟಿದ್ದಾರೆ. ಟಾರ್ ಮಾಡುವುದಕ್ಕೆ ಸಾಧ್ಯವಾಗದಿದ್ದರೆ, ಕನಿಷ್ಟ ಗಾಡಿ, ಚಕ್ಕಡಿ ಓಡಾಡುವ ಮಟ್ಟಿಗಾದರೂ ರಸ್ತೆಯನ್ನು ಸರಿಪಡಿಸಿ ಕೊಡುತ್ತೀರಾ?

ಶ್ರೀ ಹೆಚ್.ಡಿ. ದೇವೇಗೌಡ.—ಸ್ವಾಮಿ, ೨೫ ಕಿ.ಮೀ. ಕಚ್ಚಾ ರಸ್ತೆ ಇದೆ. ಇದನ್ನು ಸರಿ ಪಡಿಸುವುದಕ್ಕೆ ೩ ಲಕ್ಷ ರೂಪಾಯಿ ಹಣ ಬೇಕಾಗುತ್ತದೆ. ಇನ್ನು ಮರೂರು ಹ್ಯಾಂಡ್‌ಪೋಸ್ಟ್‌ನಿಂದ ಕುದೂರು ಮತ್ತು ಸುಗ್ಗನಹಳ್ಳಿ ಮಾರ್ಗವಾಗಿ ಹೊನ್ನಾಡಿಕೆಪರೆವಿಗೆ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿಲ್ಲ. ನ್ಯಾಷನಲ್ ಹೈವೇ ಳಲಕ್ಕೆ ಸಂಪರ್ಕ ಕಲ್ಪಿಸುವಂಥ ಬಹಳ ಮುಖ್ಯವಾದ ರಸ್ತೆ ಇದು. ಮೈಜರ್ ಡಿಸ್ಟ್ರಿಕ್ಟ್ ರೋಡ್‌ನಲ್ಲಿ ಇದು ಬರುತ್ತದೆ. ನಾವು ಕೊಡತಕ್ಕ ಹಣವೆಲ್ಲಾ ದಿನಗೂಲಿ ನೌಕರರಿಗೆ ಹೋಗುತ್ತೆ. ೨೦ ಕಿ.ಮೀ. ಉದ್ದದ ರಸ್ತೆಯಲ್ಲಿ ೫ ಕಿ.ಮೀ. ಟಾರ್ ಹಾಕ ಲಾಗಿದೆ. ಇನ್ನು ೧೫ ಕಿ.ಮೀ. ಜಲ್ಲಿ ರಸ್ತೆ ಇದೆ. ಈ ವರ್ಷ ಇನ್ನು ೫ ಕಿ.ಮೀ.ರವರೆಗೆ ಟಾರ್ ಹಾಕಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ. ೧೨ ಲಕ್ಷ ರೂಪಾಯಿ ಬೇಕಾಗುತ್ತದೆಂದು ನಮ್ಮ ಅಧಿಕಾರಿ ಗಳು ತಿಳಿಸಿದ್ದಾರೆ. ಹಂತಹಂತವಾಗಿ ಡಾಂಬರ್ ರಸ್ತೆ ಮಾಡಿಸಲಾಗುವುದು, ಗುಂಡಿ ಬಿದ್ದಿರು ವುದನ್ನು ಮುಚ್ಚಲಿಕ್ಕೆ ದಿನಗೂಲಿ ನೌಕರರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರು ಹೋಗಿ ಮುಚ್ಚಲಿ.

ಶ್ರೀ ಪಂಪಾಪತಿ.—ಅಲ್ಲಿಯ ಗ್ರಾಮಸ್ಥರು ತಾವು ಒಮ್ಮೆ ಅವರ ಗ್ರಾಮಕ್ಕೆ ಭೇಟಿ ಕೊಡ ಬೇಕೆಂದು ಮನವಿ ಮಾಡಿದ್ದಾರೆ. ತಾವು ಒಮ್ಮೆ ಭೇಟಿ ಕೊಡಿ.

ಶ್ರೀ ಹೆಚ್.ಡಿ. ದೇವೇಗೌಡ.—ಗಾಣಗಿತ್ತಿ ಅಯ್ಯೋ ಅಂದರೆ ನೆತ್ತಿ ತಣ್ಣಗೆ ಆಗುವುದಿಲ್ಲ: ಮೊದಲು ಹಣ ರೂಢಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಪಂಪಾಪತಿ.—ತಾವು ಒಮ್ಮೆ ಬಂದರೆ, ರಸ್ತೆ ದುರಸ್ತಿಯಾಗುತ್ತದೆನ್ನುವ ನಂಬಿಕೆ ಗ್ರಾಮಸ್ಥರಿಗೆ ಇದೆ. ಆದಕ್ಕಾಗಿ ತಾವು ಒಮ್ಮೆ ಭೇಟಿ ಕೊಡಿ ಎಂದು ಹೇಳಿದೆ.

ಶ್ರೀ ಹೆಚ್.ಡಿ. ದೇವೇಗೌಡ.—ಸಾಮಾನ್ಯವಾಗಿ ಮುಖ್ಯಮಂತ್ರಿಗಳು ಹೋದರೆ, ಲೋಕೋಪ ಯೋಗಿ ಮಂತ್ರಿಗಳು ಹೋದರೆ, ಹಳ್ಳ ದಿಣ್ಣೆಗಳನ್ನು ಸರಿಪಡಿಸಿ ರಸ್ತೆಯನ್ನು ದುರಸ್ತಿ ಮಾಡುತ್ತಾರೆ. ನಾನು ಬರುವುದರಿಂದಷ್ಟೇ ಉಪಯೋಗವಾಗುವುದಾದರೆ, ಬರುತ್ತೇನೆ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿದಿದೆ. ಇರತಕ್ಕ ಪ್ರಶ್ನೆಗಳನ್ನು ಲ್ಯಾಪ್ಸ್ ಮಾಡಬೇಕಾಗುತ್ತದೆ. ನಿಮ್ಮ ಹಕ್ಕುಗಳನ್ನು ಮೊಟಕುಗೊಳಿಸಬಾರದೆನ್ನುವ ದೃಷ್ಟಿಯಿಂದ ಮುಂದಿನ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.—ತಾವು ಹೇಳಿದ್ದು ಒಳ್ಳೆಯದೇ ಆಯಿತು. ತಾವು ಮಧ್ಯೆ ಪ್ರವೇಶ ಮಾಡದೇ ಇದ್ದರೆ, ಇಂಟರಪ್‌ಷನ್ ಮಾಡದೇ ಹೋದರೆ, ಒಂದು ಗಂಟೆಯೊಳಗೆ ಮುಗಿಸುತ್ತೇವೆ.